ಪ್ರವಾಸ

# ಸುರಸುಂದರಿ ಮಗ್ದಲೀನಾ

**ಇಟಲಿಯ ವಾಲ್–ಡಿ–ಫ್ಯೂನೆಸ್ ಕಣಿವೆಯ ಸ್ವರ್ಗಸದೃಶ ಹಳ್ಳಿ 'ಮಗ್ದಲೀನಾ'. ಧೀಮಂತವಾಗಿ ನಿಂತ ಡೋಲೋಮಿಟೆ ಪರ್ವತಶ್ರೇಣಿ, ಕಣಿವೆ, ಕಾಡು, ಇಳಿಜಾರು, ಹಸುರು, ಹುಲ್ಲುಗಾವಲು, ಇವುಗಳ ನಡುವೆ ಕಳಶದಂತಿರುವ ಪುಟ್ಟ ಪುಟ್ಟ ಮನೆಗಳು, ಚರ್ಚ್‌ಗಳು, ಎಲ್ಲವೂ ಮನದಲ್ಲಿ ಅಳಿಸದಂಥ ಲಹರಿ ಬರೆದುಬಿಡುತ್ತವೆ.**

**■ ಎಸ್.ಪಿ. ವಿಜಯಲಕ್ಷ್ಮಿ**



ಇಟಲಿಯ 'ಡೋಲೋಮಿಟೆ' ಪರ್ವತಶ್ರೇಣಿ ಹೆಸರನ್ನು ಕೇಳಿದ್ದೆ. ಮೈಮರೆಸುವಂಥ ಅದರ ಸುಂದರ ಚಿತ್ರಗಳನ್ನು ಕಂಡಿದ್ದೆ. ಈಚೆಗೆ ಅದನ್ನು ನಿಜವಾಗಿ ನೋಡುವ ಅವಕಾಶ ಒದಗಿಬಂತು.

ನಂದನದ ತುಣುಕೊಂದು ಭೂಲೋಕದಲ್ಲಿ ಬಿದ್ದರೆ ಹೇಗಿರಬಹುದು ಎಂದರೆ ನಿಸ್ಸಂಶಯವಾಗಿ ಈ ಹಳ್ಳಿಯನ್ನು ಬೆರಳು ಮಾಡಿ ತೋರಿಸಬಹುದು. ಇಟಲಿ ದೇಶದ 'ಆಲ್ಟೋ–ಅಡಿಗೆ' ಎನ್ನುವ ಭಾಗದಲ್ಲಿ, ಸಮುದ್ರಮಟ್ಟದಿಂದ 1339 ಮೀಟರ್ ಎತ್ತರದಲ್ಲಿ, 'ಫ್ಯೂನೆ' ಎನ್ನುವ ಟೌನಿನಿಂದ 3 ಕಿ.ಮೀ. ದೂರದಲ್ಲಿದೆ ಹಚ್ಚಹಸುರ 'ವಾಲ್–ಡಿ–ಫ್ಯೂನೆಸ್' ಕಣಿವೆ. ಆ ಕಣಿವೆಯಲ್ಲಿ ಹಸುಗಂದನಂತೆ ಮಲಗಿದೆ ಪುಟ್ಟ ಹಳ್ಳಿ 'ಮಗ್ದಲೀನಾ'.

ಈ ಕಣಿವೆ ರಚಿತವಾಗಿರುವುದು ಅನನ್ಯ ಪರ್ವತಶ್ರೇಣಿ 'ಡೋಲೋಮಿಟೆ'ಯಿಂದ. ಡೋಲೋಮಿಟೆ ಪರ್ವತಶ್ರೇಣಿ ಆಲ್ಪ್ಸ್‌ನ ಉಪಸರಪಳಿಯಾಗಿ ಇಟಲಿಯ ಉತ್ತರ ಭಾಗದಲ್ಲಿದೆ. ಇದರ ವಿಸ್ತೀರ್ಣ, ಆಕಾರ, ಗಾತ್ರ ಬೆರಗು ಹುಟ್ಟಿಸುವಂತಹುದು ಮತ್ತು ಅಮೂಲ್ಯ ಖನಿಜಾಂಶಗಳನ್ನು ಹೊಂದಿರುವ ಪರ್ವತಾವಳಿಯಿದು. ಡೋಲೋಮಿಟೆ ತನ್ನ ಹಾದಿಯಲ್ಲಿ ಸೃಜಿಸಿರುವ ಕಣಿವೆಗಳಿಗೆ ಲೆಕ್ಕವಿಲ್ಲ.

ಗಾರ್ಡಾದಿಂದ ಒಂದು ಗಂಟೆ ಯಾನದಲ್ಲಿ ಡೋಲೋಮಿಟೆ ಪರ್ವತಸಾಲು ಆರಂಭವಾಗುತ್ತದೆ. ಎರಡೂ ಕಡೆ ಗೋಡೆಯಂತೆ, ಕಡೆದಿಟ್ಟಂಥ ಮೇಲ್ಮೈ. ಕೆಲವೆಡೆ ಅಲ್ಲಲ್ಲಿ ಪದತಲದ ನೀಲಿ ಸರೋವರಗಳು, ಉದ್ದಕ್ಕೂ ಇಳಿಜಾರಿನ ಅಗಾಧ ಪರಿಧಿಯ ಕಣಿವೆಗಳು, ಹಚ್ಚಹಸುರಿನ ಕಾರ್ಪೆಟ್ ಹೊದಿಸಿದಂತೆ ಸುರೂಪ. ಅದರೆದೆಯಲ್ಲಿ ಪುಟ್ಟಪುಟ್ಟ ಮನೆಗಳ ಚಿಕ್ಕ ಹಳ್ಳಿ, ಮುಂದೊಂದು ದೊಡ್ಡ ಪಟ್ಟಣ ಕಣಿವೆಯಲ್ಲೇ. ಅರ್ಧಚಂದ್ರಾಕೃತಿಯಲ್ಲೂ ಹಾದಿಯಿಲ್ಲದಂತೆ ಕಾಣಿಸುವ ದೈತ್ಯ ಪರ್ವತಗಳು, ಮತ್ತೆ ಫಟಾಫಟ್ ಎದುರಾಗುವ ಸಣ್ಣ ರಸ್ತೆ, ಝುಮ್ಮೆನಿಸೋ ತಿರುವುಗಳು, ಮುಂದೆ ರಸ್ತೆಯೆಲ್ಲಿ? ಎನ್ನಿಸುವಂತಹ ಆತಂಕದ ತಾಣಗಳು, ಅಬ್ಬಬ್ಬಾ ಸ್ವರ್ಗ ಬೇರಿಲ್ಲ!

ಹೋಗುತ್ತಿರೋದು ಇಟಲಿಯ ಆಟೋಬಾನ್ (ಹೈವೇ), ಸುಂಯ್ ಎಂದು ಸಾಗಬೇಕೇ ವಿನಾ ಮನಬಂದಂತೆ ನಿಲ್ಲಿಸಲಾಗದು. ಒಂದಷ್ಟು ಹೊತ್ತು ನಿಂತು ನೋಡಬೇಕಿತ್ತು ಅನ್ನಿಸಿದ್ದು ಎಷ್ಟೋ ಬಾರಿ. ಈ ಆಸೆ ನಿರಾಸೆಯಾಗಲಿಲ್ಲ, ಅದಕ್ಕಿಂತ ಮನೋಹರ ಹಳ್ಳಿಯಲ್ಲೇ ಕಾರು ನಿಂತಿತ್ತು.

'ಸಂತ ಮಗ್ದಲೀನಾ' ಕೇವಲ 370ರಷ್ಟು ಜನಸಂಖ್ಯೆ ಹೊಂದಿರುವ ಡೋಲೋಮಿಟೆಯ 'ವಾಲ್–ಡಿ–ಫ್ಯೂನೆಸ್' ಕಣಿವೆಯಲ್ಲಿರುವ ಸ್ವರ್ಗಸದೃಶ ಹಳ್ಳಿ. ಕುಟೀರಗಳಾಚೆ ಮೇಲೇರುತ್ತಾ ಹೋಗುವ ಏರುಹಾದಿಗಳಿಂದ ತುತ್ತತುದಿಯ ಡೋಲೋಮಿಟೆ ಪರ್ವತದವರೆಗೆ ಅಗಾಧವಾಗಿ ಹರಡಿರುವ ಪ್ರದೇಶ 'ಪ್ಯೂಯೆ ಓಡ್ಲೇ ನ್ಯಾಷನಲ್ ಪಾರ್ಕ್' ಎಂದು ಹೆಸರುವಾಸಿ. ಇಲ್ಲಿ ವಿಶಾಲವಾದ ಹಚ್ಚಹಸುರಿನ ರತ್ನಗಂಬಳಿಯ ಮೇಲೆ ಗೋಥಿಕ್ ಗೋಪುರದ ವಿನ್ಯಾಸದಲ್ಲಿ ಎತ್ತರಕೆ ನಿಂತು ಆ ಹಿನ್ನೆಲೆಯಲ್ಲಿ ಆಕರ್ಷಕವಾಗಿ ಕಾಣುವ 14ನೇ ಶತಮಾನದ 'ಸೇಂಟ್ ಮಗ್ದಲೀನಾ' ಚರ್ಚ್, 18ನೇ ಶತಮಾನದ ಬೊಹಿಮಿಯನ್ ಸೇಂಟ್ ಜೊಹಾನ್ಸ್‌ರ ಹುತಾತ್ಮದ ಸಂಕೇತವಾದ, 'ಸೇಂಟ್ ಜೊಹಾನ್ಸ್' ಚಾಪೆಲ್‌ಗಳು ಹೆಚ್ಚುವರಿ ಆಕರ್ಷಣೆ.

ಹಳ್ಳಿಯ ಹಿಂಬದಿಯಲ್ಲಿ ಪ್ರಕೃತಿ ಸೌಂದರ್ಯ ಸೂರೆಯಾಗಿ ಚೆಲ್ಲಿದ್ದು, ದೂರದ ಹಿನ್ನೆಲೆಯಲ್ಲಿ ಕೆಣಕುವಂತೆ ಧೀಮಂತವಾಗಿ, ಚೂಪುಚೂಪಾದ ಆಕಾರದಲ್ಲಿ ನಿಂತಿವೆ ಡೋಲೋಮಿಟೆ ಪರ್ವತದ 'ಓಡ್ಲೇ' ಶ್ರೇಣಿಗಳು. ಇದರ ಮಡಿಲಲ್ಲಿ ಈ ಚರ್ಚ್‌ಗಳು ಒಂದು ಚಂದದ ಮೋತಿಫ್‌ನಂತೆ, ಹಸುರಿನ ಅಗಾಧ ಪಾತ್ರದ ಕಣಿವೆ ನಿಸರ್ಗದೇವಿಯ ವೆಲ್ವೆಟ್ ಪತ್ತಲದಂತೆ ಕಣ್ಣುಕ್ಕುವ ಸೌಂದರ್ಯದಲ್ಲಿ ಥಳಥಳಿಸುತ್ತದೆ.

